

# ಹಬ್ಬಕ್ಕೆ ಹೊಸ ಸೀರೆ

ಸೀರೆಯ ಶಾಪಿಂಗ್ ಕುರಿತ ಸೂಕ್ಷ್ಮಗಳನ್ನೆಲ್ಲ ಹೆಂಡತಿಯಿಂದ ಕೇಳಿ ತಿಳಿದುಕೊಂಡ ಗಂಡನೊಬ್ಬ, ಕಲಿತ ಜ್ಞಾನವನ್ನು ಪ್ರದರ್ಶಿಸಲು ಅಂಗಡಿಗೆ ಬಂದ. ಅಲ್ಲಿ ನಡೆದುದೇನು? ಹೆಂಡತಿಗೆ ಸೀರೆ ತರಲು ಹೊರಡುವ ಗಂಡಂದಿರು ಮೊದಲು ಈ ಬರಹ ಓದಿ.

■ ಜಿ.ವಿ. ಅರುಣ

‘ಈ ಗಂಡಸರಿಗೆ ಕಲರ್ ಯಾವುದು ಅಂತ ಗೊತ್ತೇ ಆಗಲ್ಲ. ಅರ್ಧಕ್ಕೆ ಅರ್ಧ ಕಲರ್ ಬ್ಲೈಂಡ್! ಉಳಿದವರಿಗೆ ಬಣ್ಣದ ಸರಿಯಾದ ಹೆಸರೇ ಗೊತ್ತಿರುವುದಿಲ್ಲ.’

ನನ್ನ ಹೆಂಡತಿಯ ಪೀಠಿಕೆ ಪ್ರಾರಂಭವಾಯಿತು. ನನ್ನಿಂದಾಗಿ ಇಡೀ ಗಂಡುಗಳ ಜಾತಿಗೆ ಮಂಗಳಾರತಿ ಆಯ್ತಲ್ಲ ಎನ್ನಿಸಿದರೂ, ಎಲ್ಲಾ ಗಂಡುಗಳು ಒಂದಲ್ಲ ಒಂದು ರೀತಿ ಈ ತರಹದ ಹೊಗಳಿಕೆಗೆ ಪಾತ್ರರಾಗಿರುತ್ತಾರೆ ಎಂದುಕೊಂಡು ಸಮಾಧಾನ ತಂದುಕೊಂಡೆ.

ಆದರೂ, ‘ಹಾಗಂದ್ರೆ ಹೇಗೆ? ನನಗೆ ಬಿಳಿ, ಕಪ್ಪು, ಕೆಂಪು, ಹಸಿರು, ನೀಲಿ, ಹಳದಿ ಎಲ್ಲ ಗೊತ್ತು’ ಎಂದೆ.

‘ಏನು ಗೊತ್ತೋ! ಸರಿ ನಮ್ಮ ಬಾವುಟದಲ್ಲಿ ಮೇಲೆ ಇರುವ ಬಣ್ಣ ಯಾವುದು ಹೇಳಿ ನೋಡೋಣ...?’

‘ಅದು... ಅದು...’ ನಮ್ಮ ಬಾವುಟದ ಚಿತ್ರವನ್ನು ಊಹಿಸಿಕೊಂಡೆ. ಇನ್ನೇನು ಹೇಳಬೇಕು ಅನ್ನುವಷ್ಟರಲ್ಲಿ, ‘ನೋಡಿದ್ರಾ...! ಸರಿ, ಅದು ಕಿತ್ತಳೆ ಬಣ್ಣಾನೋ ಕೇಸರಿ ಬಣ್ಣಾನೋ ಹೇಳಿ’ ಎಂದು ಸವಾಲು ಹಾಕಿದಳು.

ನಿಜವಾಗಿ ನನಗೆ ಅವೆರಡಕ್ಕೂ ಇರುವ ವ್ಯತ್ಯಾಸ ಸರಿಯಾಗಿ ಗೊತ್ತಿರಲಿಲ್ಲ. ಆದ್ದರಿಂದ ಉತ್ತರಿಸಲು ಹೋಗಲಿಲ್ಲ.

‘ಅದಕ್ಕೆ ಹೇಳಿದ್ದು... ಮುಂದಿನ ಸಲಿ ಸೀರೆ ಕೊಳ್ಳಲು ಹೋದಾಗ ನನ್ನ ಪಕ್ಕದಲ್ಲೇ ಕುಳಿತಿರಿ. ಈಗ ಬಂದೆ ಅಂತ ಕಾಫಿ ಕುಡಿಯೋಕೆ ಹೊರಟು ಬಿಡಬೇಡಿ. ಆಗ ಸ್ವಲ್ಪವಾದರೂ ಬಣ್ಣಗಳ ಬಗ್ಗೆ ಗೊತ್ತಾಗುತ್ತೆ’ ಎಂದಳು.

‘ಸರಿ ಕಣೆ, ಆದರೆ, ಆ ಅಂಗಡೀಲಿ ಸೀರೆ ತೋರಿಸ್ತಾನಲ್ಲ ಅವನಿಗಾದರೂ ಕಲರ್‌ಗಳು ಗೊತ್ತಿರಲ್ವೇನೇ?’ಗಂಡುಗಳ ಜಾತಿಗೆ ಸ್ವಲ್ಪ ಕೀರ್ತಿ ತಂದುಕೊಡಲು ಕೇಳಿದೆ!

‘ಸರಿಹೋಯ್ತು. ಅವರಿಗೆ ಏನೋ ಅಲ್ಪ ಸ್ವಲ್ಪ ಗೊತ್ತು. ಮಡಿಸಿಟ್ಟಿರುವ ಸೀರೆಗಳ ಕಡೆ ಕೈ ತೋರಿಸಿ, ಇದರಲ್ಲಿ ಯಾವುದು ತೆಗೆಯಲಿ ಮೇಡಂ? ಅಂತಾರೆ. ಇಲ್ಲ, ಇದು ನೋಡಿ ಮೇಡಂ, ಹೊಸಾ ಡಿಸೈನ್, ನಾಲ್ಕು ಐದು ಕಲರ್‌ನಲ್ಲಿ ಮಾತ್ರ ಬಂದಿದೆ. ನಿಮಗೇ ಮೊದಲು ತೋರಿಸುತ್ತಾ ಇರೋದು’ ಅಂತ ಬುರುಡೆ ಹೊಡೆಯುತ್ತಾರೆ. ನಾವು ನಮ್ಮ ಕೆಲಸ ಆಗಬೇಕಲ್ಲ, ಅದಕ್ಕೆ ಹೌದೇನಪ್ಪ ಅಂತ ಅವನನ್ನು ಸ್ವಲ್ಪ ಉಬ್ಬಿಸುತ್ತೇವೆ ಅಷ್ಟೆ’. ಇದು ಅವಳ ಪ್ರತಿಜವಾಬು.

ನನ್ನ ಹೇಳಿಕೆಯು ಅಷ್ಟು ಬೇಗ ಠುಸ್ ಆಗುವುದು ನನಗೆ ಇಷ್ಟವಿರಲಿಲ್ಲ. ಕೇಳಿದೆ, ‘ಹಾಗೇನಿಲ್ಲ, ನೀನು ಒಂಥರಾ ಪಿಂಕ್‌ನಲ್ಲಿ ಹೊಸ ಡಿಸೈನ್ ಸೀರೆ ತೋರಿಸಪ್’ ಅಂದಾಗ ಅವನು ತೆಗೆಯೋ ಸೀರೆ ಒಂಥರಾ ಪಿಂಕ್ ತಾನೇ?’ ಎಂದೆ.

‘ಆ ಟ್ರಿಕ್ ನಿಮಗೆ ಅರ್ಥ ಆಗುವುದಿಲ್ಲ. ಒಂಥರಾ ಪಿಂಕ್ ಅಂತ ಯಾವ ಬಣ್ಣಾನು ಇರುವುದಿಲ್ಲ. ಹಾಗೆ ಹೇಳಿದರೆ ಅವನು, ಅವನಿಗೆ ತೋಚಿದ ಪಿಂಕ್ ಬಣ್ಣದ ಒಂದು ಸೀರೆ ತೆಗಿತಾನೆ. ಹಾಗೆ ಬೇರೆ ಬೇರೆ ಶೇಡಿನ ಒಂದು ಐದಾರು ಸೀರೆಗಳನ್ನು ತೆಗೀತಾನೆ. ಆ ಡಿಸೈನ್‌ಗಳಲ್ಲಿ ನಮಗೆ